**ಓ.ಎಸ್. ನಂಃ 402/2021**

**<u>ಪಿಡಬ್ಲ್ಯೂ:1</u>**

**ದಿನಾಂಕಃ 02.07.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಜಿ ವಕೀಲರಿಂದಃ</u>**

1. ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ಪರಿಶೀಲಿಸಿದ ನಂತರದಲ್ಲಿಯೇ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನಾನು ದಾವಾ ಆಸ್ತಿಯ ಪಹಣಿ ಮತ್ತು ಎಮ್.ಆರ್ ಗಳನ್ನು ನೋಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿಯು ಮಾರಾಟಗಾರರಾದ ರೇಣುಕಮ್ಮ, ಸ್ವಾಮೀಗೌಡ ಮತ್ತು ಪುಟ್ಟಲಕ್ಷ್ಮೀ ಇವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ. ಚಿಕ್ಕಪ್ಪುಗೌಡರಿಂದ ದಾವಾ ಆಸ್ತಿಯು ಸದರಿಯವರಿಗೆ ಹೋಗಿರುತ್ತದೆ. ದಾವಾ ಆಸ್ತಿಯು ಚಿಕ್ಕಪ್ಪುಗೌಡರಿಂದ ರೇಣುಕಮ್ಮ, ಸ್ವಾಮೀಗೌಡ ಮತ್ತು ಪುಟ್ಟಲಕ್ಷ್ಮೀ ರವರಿಗೆ ಬಂದಿರುತ್ತದೆ ಎಂದು ತೋರಿಸಲು ನಾನು ವರ್ಗಾವಣೆ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ನಾನು ಯಾವುದೇ ವರ್ಗಾವಣೆ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6 ರ ದಾಖಲೆಯು ಸ್ವಾಮೀಗೌಡರಿಂದ ದಾವಾ ಆಸ್ತಿ ನನ್ನ ಹೆಸರಿಗೆ ವರ್ಗಾವಣೆಯಾದ ಆದೇಶವಾಗಿರುತ್ತದೆ ಎಂದರೆ ಸರಿ.

2. ಈ ದಾವೆಯನ್ನು ನಡೆಸಲು ನಾನು ಕೆ.ಆರ್.ನಗರದ ಪರಮೇಶ್ವರ ಎನ್ನುವ ವಕೀಲರಿಗೆ ವಕಾಲತ್ ನ್ನು ನೀಡಿರುತ್ತೇನೆ. ಪರಮೇಶ್ವರ ವಕೀಲರು ಈ ದಾವೆಯಲ್ಲಿ ವಕಾಲತ್ ಸಲ್ಲಿಸುವ ಪೂರ್ವದಲ್ಲಿ ಕೆ.ಆರ್.ನಗರದ ಶ್ರೀ ಜಯರಾಮೇಗೌಡ ವಕೀಲರು ಈ ದಾವೆಯನ್ನು ನಡೆಸುತ್ತಿದ್ದರು. ವಾದಪತ್ರವನ್ನು ನನ್ನ ಮಾಹಿತಿಯ ಮೇರೆಗೆ ಶ್ರೀ ಜಯರಾಮೇಗೌಡ ವಕೀಲರು ತಯಾರಿಸಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ವಕೀಲರಿಂದ ಕಾನೂನು ಸಲಹೆಯನ್ನು ಪಡೆದಿರಲಿಲ್ಲ.

3. ನನ್ನ ಕುಟುಂಬಸ್ಥರಿಂದ ಮತ್ತು ಪರಿಚಯಸ್ಥರಿಂದ ಸಲಹೆಯನ್ನು ಪಡೆದು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಅವರ ಹೆಸರು ಈಗ ನನಗೆ ಹೇಳಲು ಬರುವುದಿಲ್ಲ. ಮೂಲ

ಮಾಲೀಕರಾದ ಚಿಕ್ಕಪ್ಪುಗೌಡರವರಿಗೆ 4 ಜನ ಮಕ್ಕಳಿರುತ್ತಾರೆ ಅವರ ಹೆಸರು 1 ನೇ ಪ್ರತಿವಾದಿಯಾದ ದಿಬ್ಬಣ್ಣೇಗೌಡ, ಬೊಮ್ಮಮ್ಮ, ಬೋಮ್ಮೇಗೌಡ ಮತ್ತು ಸ್ವಾಮೀಗೌಡ ಅಂತ ಇರುತ್ತದೆ. ಚಿಕ್ಕಪ್ಪುಗೌಡರವರ 4 ಜನ ಮಕ್ಕಳ ಮಧ್ಯೆ ಪಾಲು ವಿಭಜನೆ ಆಗಿರುತ್ತದೆ ಆದರೆ ಅದಕ್ಕೆ ಸಂಬಂಧಿಸಿದಂತೆ ನಾನು ವಿಭಾಗಪತ್ರವನ್ನು ನೋಡಿರುವುದಿಲ್ಲ ಬದಲಾಗಿ ಹಕ್ಕು ಖುಲಾಸೆ ಪತ್ರವನ್ನು ನೋಡಿರುತ್ತೇನೆ. ಚಿಕ್ಕಪ್ಪುಗೌಡರ ಮಕ್ಕಳ ಮಧ್ಯೆ ಆದ ವಿಭಾಗಪತ್ರವನ್ನು ಮಾರಾಟಗಾರರು ನನಗೆ ನೀಡಿರುವುದಿಲ್ಲ ಅದರೆ ಹಕ್ಕು ಖುಲಾಸೆ ಪತ್ರವನ್ನು ಅವರು ನನಗೆ ತೋರಿಸಿರುತ್ತಾರೆ. 1975 ರಲ್ಲಿ ಚಿಕ್ಕಪ್ಪುಗೌಡರ 4 ಜನ ಮಕ್ಕಳ ಮಧ್ಯೆ ವಿಭಾಗವಾಗಿದೆ ಎಂದರೆ ಸಾಕ್ಷಿಯು ಅವರ ಮಧ್ಯೆ ಹಕ್ಕು ಖುಲಾಸೆಯಾದ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. 1975 ರಲ್ಲಿ ಆದ ವಿಭಾಗಪತ್ರದ ‘ಸಿ’ ಅನುಸೂಚಿ ಆಸ್ತಿಯು ಮಾರಾಟಗಾರನಾದ ಸ್ವಾಮೀಗೌಡರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಯ ಪೈಕಿ ಕೇವಲ 13 ಗುಂಟೆ ಜಮೀನು ಮಾತ್ರ ‘ಸಿ’ ಅನುಸೂಚಿಯ ಪ್ರಕಾರ ಮಾರಾಟಗಾರನಾದ ಸ್ವಾಮೀಗೌಡರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

4. ಸರ್ವೆ ನಂಬರ್ 31/2 ಬಿ ರಲ್ಲಿ ಸ್ವಾಮೀಗೌಡರ ಹಿಸ್ಸೆಗೆ ಬಂದ 13 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನು ಹಾರಂಗಿ ನಾಲ ನಿರ್ಮಾಣಕ್ಕೆ ಭೂಸ್ವಾಧೀನವಾಗಿರುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 31/2 ಬಿ 1 ಎಕರೆ 1 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನು ಹಾರಂಗಿ ನಾಲ ನಿರ್ಮಾಣಕ್ಕೆ ಭೂಸ್ವಾಧೀನವಾಗಿರುವುದು ಹೌದು ಎಂದು ನುಡಿದಿರುತ್ತಾರೆ. ನಿಪಿ.9 ರಿಂದ 14 ರ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ.13 ರ ದಾಖಲೆಯಲ್ಲಿ ಸರ್ವೆ ನಂಬರ್ 31/2 ಬಿ ಯ 13 ಗುಂಟೆ ಜಮೀನಿಗೆ ಸ್ವಾಮೀಗೌಡರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.13 ಮತ್ತು 14 ರ ದಾಖಲೆಗಳಲ್ಲಿ ಸರ್ವೆ ನಂಬರ್ 31/2 ಬಿ ರ 1 ಎಕರೆ 1 ಗುಂಟೆ ಜಮೀನಿನ ಪೈಕಿ 13 ಗುಂಟೆ ಜಮೀನಿಗೆ 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ.

5. 2 ನೇ ವಾದಿ ದಾವಾ ಆಸ್ತಿಯ ಜಂಟಿ ಖರೀದಿದಾರರಾಗಿರುತ್ತಾರೆ. 2 ನೇ ವಾದಿ ನನ್ನ ರಕ್ತಸಂಬಂಧಿ ಅಲ್ಲ. ದಾವಾ ಆಸ್ತಿಯನ್ನು ನಾನು ಮತ್ತು 2 ನೇ ವಾದಿ ಜಂಟಿಯಾಗಿ ಖರೀದಿ ಮಾಡಿದ ಕಾರಣ ನಿಪಿ.1 ರ ಖರೀದಿ ಪತ್ರಕ್ಕೆ ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ದಾವಾ ಆಸ್ತಿಯ ಸಂಬಂದ ಸಾಲ ಪಡೆದ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸಾಲವನ್ನು ನಾನೇ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ.

ಬ್ಯಾಂಕಿನಿಂದ ಸದರಿ ಸಾಲವನ್ನು ಪಡೆಯುವ ಪೂರ್ವದಲ್ಲಿ ನಾನು ವಕೀಲರಿಂದ ಪಡೆದ ಕಾನೂನು ಸಲಹೆ(Legal Opinion) ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇಲ್ಲ.

6. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ದಾವಾ ಆಸ್ತಿಯು ಸ್ವಾಮೀಗೌಡರಿಗೆ ಯಾರಿಂದ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. 1975 ರಲ್ಲಿ ಆದ ಪಾಲುವಿಭಾಗ ಪತ್ರದ ಪ್ರಕಾರ ಎ ಮತ್ತು ಡಿ ಅನುಸೂಚಿ ಆಸ್ತಿಯನ್ನು ಚಿಕ್ಕಪ್ಪೇಗೌಡರು ತಮಗಾಗಿ ಉಳಿಸಿಕೊಂಡಿದ್ದರು ಎಂದರೆ ಸಾಕ್ಷಿಯು ನನಗೆ 1975 ರ ಪಾಲುವಿಭಾಗದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. 1983 ರಲ್ಲಿ ಚಿಕ್ಕಪ್ಪೇಗೌಡರು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಚಿಕ್ಕಪ್ಪೇಗೌಡರು ಮರಣ ಹೊಂದಿದ ಬಗ್ಗೆ ನನಗೆ ಗೊತ್ತಿರುತ್ತದೆ ಆದರೆ ಅವರು ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ಎಂಬ ಮಾಹಿತಿ ಇಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

7. ನಾನು ಮತ್ತು ಪ್ರತಿವಾದಿಯರು ಒಂದೇ ಊರಿನವರು ಎಂದರೆ ಸರಿ. 1975 ರ ವಿಭಾಗಪತ್ರದ ಎ ಮತ್ತು ಡಿ ಅನುಸೂಚಿ ಆಸ್ತಿಯನ್ನು ಚಿಕ್ಕಪ್ಪೇಗೌಡರ ಮರಣದ ನಂತರ 1 ನೇ ಪ್ರತಿವಾದಿಯೇ ಸ್ವಾಧೀನ ಹೊಂದಿ ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಸ್ವಾಧೀನದಲ್ಲಿ ನಾವೇ ಇರುತ್ತೇವೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

8. ಇದೇ ದಾವಾ ಆಸ್ತಿಯ ಸಂಬಂಧ ಮಾರಾಟಗಾರನಾದ ಸ್ವಾಮೀಗೌಡ ಮತ್ತು ಅವರ ಸಹೋದರನಾದ ಬೋಮ್ಮೇಗೌಡ ಸೇರಿ ಇದೇ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯಾದ ದಿಬ್ಬಣ್ಣೇಗೌಡರ ವಿರುದ್ಧ ಅಸಲು ದಾವೆ ಸಂಖ್ಯೆ 194/2010 ರಂತೆ ನಿರ್ಬಂದಕಾಜ್ಞೆ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆ ವಿಚಾರಣೆಗೆ ಬಾಕಿ ಇರುವಾಗ ನಾನು ಸ್ವಾಮೀಗೌಡ ಮತ್ತು ಇತರರಿಂದ ಈ ದಾವೆಯ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 194/2010 ರ ದಾವೆಯು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

9. ದಾವಾ ಆಸ್ತಿಯ ಪಕ್ಕದಲ್ಲಿ ಸರ್ವೆ ನಂಬರ್ 31/5 ರಲ್ಲಿ ಇರುವ ಗಿರೀಶಗೌಡರವರ ಜಮೀನು ಇದೇ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಂದಾಯ ದಾಖಲೆಗಳಲ್ಲಿ ದಾವಾ ಆಸ್ತಿಯ ಪಕ್ಕದಲ್ಲಿ ಗೀರಿಶಗೌಡರವರ ಜಮೀನು ಇದೆ ಎಂದು ತಪ್ಪಾಗಿ ನಮೂದಾಗಿದ್ದು ಅದನ್ನು

ನಾನು ಆದಷ್ಟು ಬೇಗ ಸರಿಪಡಿಸುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಸರ್ವೆ ನಂಬರ್ 31 ರಲ್ಲಿ ಎಷ್ಟು ಪೋಡುಗಳಿವೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಅಂದಾಜು ಹತ್ತಕ್ಕಿಂತ ಹೆಚ್ಚು ಪೋಡುಗಳಿರಬಹುದು ಎಂದು ಸಾಕ್ಷಿಯು ನುಡಿದಿರುತ್ತಾರೆ. ಸರ್ವೆ ನಂಬರ್ 31 ರ ಜಮೀನಿನ ದಕ್ಷಿಣ ದಿಕ್ಕಿಗೆ ಸರ್ವೆ ನಂ.26 ರ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ದಿಕ್ಕುಗಳ ಹೆಸರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 31 ರ ಜಮೀನಿನ ಪೂರ್ವ ದಿಕ್ಕಿಗೆ ಸರ್ವೆ ನಂಬರ್ 28 ಮತ್ತು 29 ರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 31 ರ ಜಮೀನಿನ ಪೂರ್ವ ದಿಕ್ಕಿರೆ ರಸ್ತೆ ಇದೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 31 ರ ಜಮೀನಿನ ಪಶ್ಚಿಮಕ್ಕೆ ಸರ್ವೆ ನಂಬರ್ 28 ಮತ್ತು 29 ರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಶ್ಚಿಮಕ್ಕೆ ಹಾರಂಗಿ ನಾಲಾ ಇದೆ ಎಂದು ನುಡಿದಿರುತ್ತಾರೆ.

10. ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಪಿ.1 ರ ಕ್ರಯಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಆಸ್ತಿಯ ಮೇಲೆ ಯಾವುದೇ ಪರಭಾರೆ ಮತ್ತು ಕೋರ್ಟ ಪ್ರಕರಣ ಬಾಕಿ ಇರುವುದಿಲ್ಲ ಎಂದು ನಿಪಿ.1 ರ ದಾಖಲೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 31/2 ಬಿ ರ 1 ಎಕರೆ 1 ಗುಂಟೆ ಜಮೀನಿನ ಪೈಕಿ ಸ್ವಾಮೀಗೌಡರ ಹಿಸ್ಸೆಗೆ ಕೇವಲ 13 ಗುಂಟೆ ಜಮೀನು ಮಾತ್ರ ಹೋಗಿದ್ದು, ಸದರಿ 13 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನು ಹಾರಂಗಿನಾಲಾ ನಿರ್ಮಾಣಕ್ಕೆ ಭೂ ಸ್ವಾಧೀನವಾಗಿದ್ದು ಸ್ವಾಮೀಗೌಡರಿಗೆ ಸರ್ವೆ ನಂಬರ್ 31/2 ಬಿ ರ 1 ಎಕರೆ 1 ಗುಂಟೆ ಜಮೀನಿನ ಮೇಲೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ರಿಯಲ್ ಎಸ್ಟೇಟ ವ್ಯವಹಾರ ಮಾಡುವ ಆನಂದ ಎನ್ನುವವರ ಪರಿಚಯ ನನಗೆ ಇದೆ. ಇದೇ ದಾವಾ ಆಸ್ತಿಯ ಸಂಬಂದ ಅಸಲು ದಾವೆ ಸಂಖ್ಯೆ 194/10 ರ ದಾವೆ ವಿಚಾರಣೆಗೆ ಬಾಕಿಯಿರುತ್ತದೆ ಎನ್ನುವ ವಿಷಯ ಗೊತ್ತಿದ್ದು ಸಹ ನಾನು ದಾವಾ ಆಸ್ತಿಯನ್ನು ಕಾನೂನು ಬಾಹಿರವಾಗಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

11. 2013 ರಲ್ಲಿ ಪ್ರತಿವಾದಿಯರು ದಾವಾ ಆಸ್ತಿಗೆ ಅತಿಕ್ರಮಣ ಪ್ರವೇಶ ಮಾಡಿ ನಮ್ಮ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿ ಪ್ರತಿವಾದಿಯರ ವಿರುದ್ದ ಕಾನೂನು ಕ್ರಮ ಕೈಗೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಸುಮಾರು 50 ವರ್ಷಗಳಿಂದಲೂ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 439/15 ರ ದಾವೆ ವಜಾಗೊಂಡಿರುತ್ತದೆ ಹಾಗೂ ಅದರ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾವೆಯನ್ನು ಬೊಮ್ಮೇಗೌಡ ಮತ್ತು ಅವರ ಮಕ್ಕಳು ನಮ್ಮ ವಿರುದ್ದ ಹೂಡಿದ್ದರು. ನಿಪಿ.21 ರ ವಾದಪತ್ರದಲ್ಲಿ ಇದೇ ದಾವಾ ಆಸ್ತಿಯ ಪಶ್ಚಿಮಕ್ಕೆ ಸರ್ವೆ ನಂಬರ್ 28 ರ ಜಮೀನು ಇದೆ ಎಂದು

ಬರೆಯಲಾಗಿದೆ ಎಂದರೆ ಸಾಕ್ಷಿಯು ಅದನ್ನು ನಾವು ಬರೆಸಿರುವುದಿಲ್ಲ ಬದಲಾಗಿ ಸದರಿ ದಾವೆಯನ್ನು ಹೂಡಿದವರು ಬರೆಸಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ನಾವು ನಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಹಾಗೂ ಅದನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಕೆ.ಆರ್.ನಗರ.